ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಹೆಂಡತಿ ಗಂಡನ ಮಾತಿನಂತೆ ನಡೆದುಕೊಳ್ಳಬೇಕಾದರೆ ಏನು ಮಾಡಬೇಕು?*



ಹೆಂಡತಿಯ ನಡಿಗೆಗೆ ತಕ್ಕಂತೆ ಗಂಡ ಲೆಫ್ಟ್ ರೈಟ್ ಹೇಳಬೇಕು!

ವಿದ್ಯಾನಾಗ್, ಬೆಂಗಳೂರು
*ಮೀನಿಗೂ, ಜಾಮೀನಿಗೂ ಏನು ವ್ಯತ್ಯಾಸ? ಏನು ಸಾಮ್ಯ?*
ಕೊಳ ಇದ್ದಲ್ಲಿ ಮೀನು, ಕೋಳ ಇದ್ದಲ್ಲಿ ಜಾಮೀನು; ಎರಡೂ ಮುಳುಗಿದಾಗಲೇ ಜೀವಂತ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ಹೆಂಡತಿಗೆ ಬಡಿಯುವುದನ್ನು ನಿಲ್ಲಿಸ್ದೀಯಾ? ಎಂದು ತಲೆ ತಿನ್ನೋ ಪ್ರಶ್ನೆ ಕೇಳ್ತಾರೆ, ಏನೆಂದು ಉತ್ತರಿಸಲಿ ರಾಮ್?*
ಛಾನ್ಸೇ ಸಿಕ್ಕಿಲ್ಲ, ಇನ್ನೂ ಅವಳೇ ಬಡಿಯುತ್ತಿದ್ದಾಳೆ ಎನ್ನಿ!

ವಿರಾಜ್ ಅಡೂರು, ಕಾಸರಗೋಡು
*ಅಶರೀರವಾಣಿ ಮತ್ತು ಆಕಾಶವಾಣಿಯ ನಡುವಿನ ವ್ಯತ್ಯಾಸವೇನು?*
ಅಶರೀರವಾಣಿಯದು ಶುದ್ಧಭಾಷೆ, ಆಕಾಶವಾಣಿಯದು ಕಲಬೆರಕೆ!

ಮಂಜು, ಬಿಜಾಪುರ
*ಲೋಕಾಯುಕ್ತದಲ್ಲೂ ಭ್ರಷ್ಟತೆ ಇದೆಯಂತೆ?*



ಗುಡಿಸುವ ಪೊರಕೆಗೆ ಕಸ ಅಂಟುವುದು ಸಹಜ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ರಾಮಾಯಣ ಮತ್ತು ಮಹಾಭಾರತ ಇವುಗಳಲ್ಲಿಯ ವ್ಯತ್ಯಾಸವೇನು?*
ರಾಮಾಯಣದಲ್ಲಿ ದೇವನೇ ಮೇಯ್ನ್ ಬ್ಯಾಟ್ಸ್‌ಮನ್, ಮಹಾಭಾರತದಲ್ಲಿ ದೇವ ಮ್ಯಾಚ್ ರೆಫರಿ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಹೆಂಡದಲ್ಲಿ ಬಂದ ದುಡ್ಡು ಗಾಳಿಯಲ್ಲಿ ತೂರಿಹೋಯಿತಂತೆ?*
ಅದನ್ನೇ ಆಧಾರವಾಗಿರಿಸಿಕೊಂಡು ಮುಕ್ತಾರಾಂ ಮಲ್ಯ ಮಾರುತಾ... ಧಾರವಾಹಿ ತೆಗೆಯುತ್ತಾರಂತೆ!

ದೇಶವಳ್ಳಿ ಶಿವು, ಸಂತೇಮಾರಳ್ಳಿ
*ಆದಿಮಾನವ, ಆಧುನಿಕ ಮಾನವರಲ್ಲಿ ಉತ್ತಮರು ಯಾರು?*
ಆದಿಮಾನವನೇ; ಅವನದು ನಿಯಮಿತ ಬಯಕೆ, ಇವನ ಕಾಮುಗಳಿಗೆ ಫುಲ್‌ಸ್ಟಾಪೇ ಇಲ್ಲ!

ಗಾಯತ್ರಿ, ರಾಜಾಜಿನಗರ
*ಸಣ್ಣದೊಂದು ಬುದ್ಧಿಮಾತು ಹೇಳಿದರೂ ಸಂಬಂಧಗಳು ಕಡಿದುಹೋಗುತ್ತದಲ್ಲಾ...?*
ನಿಮ್ಮ ಲೆಕ್ಕದಲ್ಲಿ ಅದು ಸಣ್ಣದೊಂದು ಬುದ್ಧಿಮಾತು, ಅವರ ಲೆಕ್ಕದಲ್ಲಿ ಬುದ್ಧಿಯಿಲ್ಲದ ಸಣ್ಣ ಮಾತು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಅಗ್ನಿಶಾಮಕ ದಳದಲ್ಲಿ ಮಹಿಳೆಯರನ್ನು ನೇಮಕ ಮಾಡದಿರಲು ಕಾರಣವೇನು?*
ಬೆಂಕಿಯಲ್ಲಿ ಸಿಕ್ಕಿಬಿದ್ದ ತರುಣನನ್ನು ಬಚಾವ್ ಮಾಡಲು ಕೈಕೊಟ್ಟರೆ ನಿನ್ನನ್ನು ಅಗ್ನಿಸಾಕ್ಷಿಯಾಗಿ ಕೈಹಿಡಿದಿದ್ದೇನೆ ಎಂದುಬಿಟ್ಟಾನೆಂಬ ಭಯ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಕೆಲವು ಎಳೇ ಮಕ್ಕಳನ್ನು ನೋಡುತ್ತಲೇ ಇರಬೇಕೆನ್ನಿಸುವುದರ ಕಾರಣ?*
ಧಗೆಯಿರದ, ಹಗೆಯಿರದ, ಹೊಗೆಯಿರದ ನಗೆಮೊಗದ ಸೊಬಗಿಗೆ ಮಗುವೇ ಅತ್ಯುತ್ತಮ ಜಾಹೀರಾತು!

ಗಿರೀಶ್ ಎಸ್.ಆರ್, ಬೆಂಗಳೂರು
*ಭಾನುವಾರ ಬೆಳಿಗ್ಗೆ ಏಕೆ ಸಕ್ಕರೆ ನಿದ್ರೆ ಬರೋಲ್ಲ?*
ಅಲಾರಂ ಹೊಡೆಯುವುದಿಲ್ಲವಲ್ಲ! ಭಂಗದ ಭಯ ಇದ್ದಾಗಲೇ ಭಂಗಿಯ ಅಮಲು ಹೆಚ್ಚು!

ಎನ್. ಭರತರಾಜ್, ಸಂಡೂರು
*ನಾನು 86ನೆಯ ಇಸವಿಯಿಂದಲೂ ಸುಧಾ ಓದುತ್ತಿದ್ದೇನೆ; ಗುರುವಾರದಂದು ಸುಧಾ ಬರದಿದ್ದರೆ ನಾನು ಮುಖವನ್ನೇ ತೊಳೆಯುವುದಿಲ್ಲ!*
ನಿಮ್ಮ ತೊಳೆಯದ ಮುಖವನ್ನು ಜಗಕ್ಕೆ ತೋರುವುದು ಬೇಡವೆಂದೇ ತಪ್ಪದೆ ಗುರುವಾರ ಸುಧಾ ತಲುಪಿಸಿಬಿಡುತ್ತೇವೆ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ರಾಮ್‌ಜೀ, ಯೋಗ್ಯತೆಗೆ ಯೋಗವೊಂದೇ ಮಾನದಂಡವಾಗಬಾರದಲ್ಲವೇ?*
ಅವನು ಯೋಗ ಟೀಚರ್ ಆಗಿದ್ದರೆ, ಆಗಬಹುದು!

## ಬಹುಮಾನಿತ ಪ್ರಶ್ನೆ

ಹೆಚ್.ಜಿ. ಮಧು, ದೊಡ್ಡಚೆಲ್ಲೂರು
*ಹೆಂಡತಿಯ ಜೊತೆ ಮ್ಯಾಚಿಂಗ್ ಬ್ಲೌಸ್ ಹುಡುಕಲು ಹೊರಟವರಿಗೆ ನಿಮ್ಮ ಸಲಹೆ ಏನು?*
ಷೇವಿಂಗ್ ಸೆಟ್, ಎರಡು ದಿನಕ್ಕಾಗುವಷ್ಟಾದರೂ ಬುತ್ತಿ ಕಟ್ಟಿಕೊಂಡೇ ಹೋಗಿ; ಬರಲು ಎಷ್ಟು ದಿನವಾದೀತೋ ಏನೋ!

ವಿ. ಹಮೀದ್, ವಿಟ್ಲ
*ಮಾನವ ಸಾಕು ಎನ್ನುವ ವಸ್ತು ಯಾವುದು?*
ಬೇಕಾದಷ್ಟಿವೆ; ಪ್ರಾಣಿಗಳನ್ನು, ಪಕ್ಷಿಗಳನ್ನು, ಮಕ್ಕಳನ್ನು, ಹೆಂಡತಿಯನ್ನು, ಮನೆ ಅಳಿಯನನ್ನು ಸಾಕು ಎನ್ನುತ್ತಾನೆ!

ಕಂಡಕ್ಟರ್ ರಾಜು, ಗುಬ್ಬಿ
*ಸುಧಾ ಸಂಪಾದಕರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂತು. ನಿಮಗೆ ಯಾವಾಗ...?*
ಎಂದೆಂದೂ ಇಲ್ಲ; ಇಂತಹ ಅಂಕಣ ಬರೆಯುವವರಿಗೆ ತಮಾಷೆಗೂ ಯಾರೂ ಪ್ರಶಸ್ತಿ ಕೊಡಲ್ಲ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ
*ಹೆಂಗಸಿಗೆ ಮಾತು ನಿಲ್ಲುವುದಿಲ್ಲ; ಗಂಡಸಿಗೆ?*



ಆಟೋರಿಕ್ಷಾ ಸಹ ನಿಲ್ಲುವುದಿಲ್ಲ!

ಎಂ.ಎನ್. ಸೋಮಶೇಖರ್, ಮೈಸೂರು
*11-11-2011ರ ಮಹತ್ವವೇನು?*
ಎರಡು ಸಾರಿ ಮೂರು ನಾಮ ಹಾಕಿಸಿಕೊಂಡರೆ ಉಳಿಯುವುದು ಅಡ್ಡಗೀಟು ಮತ್ತು ಶೂನ್ಯ ಮಾತ್ರ ಎಂದು ಸೂಚಿಸುವ ದಿನಾಂಕವದು!

ಎನ್.ವಿ. ಶ್ರೀನಿವಾಸ್, ಮೈಸೂರು
*ಕೋಪ ಬಂದಾಗ ಹಲ್ಲು ಉದುರಿಸಿಬಿಡ್ತೀನಿ ಎನ್ನುತ್ತಾರೆ; ಹಲ್ಲೇ ಇಲ್ಲದಿದ್ದರೆ...?*
ಹಲ್ಲೆಯಂತೂ ತಪ್ಪುವುದಿಲ್ಲ!

ಎಂ.ವಿ. ಶ್ರೀನಿವಾಸ, ಚನ್ನಗಿರಿ
*ಒಗಟೊಗಟಾಗಿ ಮಾತನಾಡುವವರಿಗೆ ಏನೆನ್ನಬೇಕು?*
ಹಿರೇಮಗಳೂರು ಕಣ್ಣನ್!

■ ರಾಮ್